

# ಪ್ರಯಾಣದಲ್ಲಿ ಜೊತೆಗಾರ

ಮೋಕ್ಷಪುರ ಎಂಬ ಗ್ರಾಮದಲ್ಲಿ ಲಕ್ಷ್ಮಮ್ಮ ಎಂಬ ಹಿರಿಯಳಿದ್ದಳು. ಈಕೆಗೆ ರಾಮಶರ್ಮ ಎಂಬ ಮಗನಿದ್ದನು. ಈತನು ಪೌರೋಹಿತ್ಯ ಮಾಡಿಕೊಂಡು ಕುಟುಂಬವನ್ನು ಪೋಷಿಸುತ್ತಿದ್ದನು. ಒಂದು ದಿನ ರಾಮಶರ್ಮನಿಗೆ ಹತ್ತಿರದ ಊರಿಗೆ ಹೋಗಬೇಕಾಯಿತು. ಆ ಊರಿಗೆ ಹೋಗಬೇಕಾದರೆ ಮಧ್ಯದಲ್ಲಿರುವ ಸಣ್ಣ ಅಡವಿಯನ್ನು ದಾಟಬೇಕು. ಆಗ ಲಕ್ಷ್ಮಮ್ಮ ಮಗನಿಗೆ 'ಮಗು ಹತ್ತಿರದ ಊರಿಗೆ ಹೋಗುತ್ತಿದ್ದೀಯ. ಒಂಟಿಯಾಗಿ ಹೋಗುವುದು ಕ್ಷೇಮವಲ್ಲ. ಜೊತೆಗೆ ಯಾರನ್ನಾದರೂ ಕರೆದುಕೊಂಡು ಹೋಗು' ಎಂದಳು. ಆಗ ರಾಮಶರ್ಮ ತಾಯಿಗೆ 'ಅಮ್ಮಾ ನಾನು ಜರೂರಾಗಿ ಹೋಗಬೇಕಾಗಿದೆ. ಈಗ ಜೊತೆಗಾರನಿಗಾಗಿ ಕಾದರೆ ಆಲಸ್ಯವಾಗುತ್ತದೆ, ಒಬ್ಬನೇ ಹೋಗುತ್ತೇನೆ' ಎಂದನು.

ಮಗನ ತೊಂದರೆಯನ್ನು ನೋಡಿದ ಲಕ್ಷ್ಮಮ್ಮ ಮನೆಯ ಹಿತ್ತಲಿನಲ್ಲಿರುವ ಬಾವಿ ಹತ್ತಿರ ಹೋಗಿ ಒಂದು ಏಡಿಯನ್ನು ಮತ್ತು ಸ್ವಲ್ಪ ಕರ್ಪೂರವನ್ನು ಒಂದು ಡಬ್ಬಿಯಲ್ಲಿ ಹಾಕಿ ಮಗನಿಗೆ ಕೊಡುತ್ತಾ 'ಮಗೂ ಈ ಡಬ್ಬಿಯನ್ನು ತೆಗೆದುಕೊಂಡು ಹೋಗು, ಇದರಲ್ಲಿ ಒಂದು ಏಡಿ, ಸ್ವಲ್ಪ ಕರ್ಪೂರವಿದೆ. ಸಮಯ ಬಂದಾಗ ಇದು ನಿನಗೆ ಸಹಾಯವಾಗುತ್ತದೆ' ಎಂದು ಹೇಳಿದಳು.

ಆಗ ರಾಮಶರ್ಮ 'ಅಮ್ಮಾ ಏಡಿಯನ್ನು ಜೊತೆಯಾಗಿ ತೆಗೆದುಕೊಂಡು ಹೋಗುವುದಾ? ಇದು ನನಗೇನು ಸಹಾಯ ಮಾಡುತ್ತದೆ?' ಎಂದು ಅಪಹಾಸ್ಯ ಮಾಡಿದನು. ಆಗ ತಾಯಿ 'ಮಗೂ ಹಾಗೆ ಮಾತನಾಡಬೇಡ, ಸಹಾಯ ಮಾಡುವುದಕ್ಕೆ ಸಣ್ಣ ದೊಡ್ಡ ಎಂಬ ಭೇದ ಇರುವುದಿಲ್ಲ' ಎಂದು ಹೇಳುತ್ತಾ ಒಂದು ಸಿಂಹ ಮತ್ತು ಒಂದು ಇಲಿಯ ಕಥೆ ಹೇಳಿದಳು:

ಒಂದು ಅಡವಿಯಲ್ಲಿ ಒಂದು ಸಿಂಹ ಮರದ ಕೆಳಗೆ ನಿದ್ರಿಸುತ್ತಿರಲು ಮರದ ಮೇಲಿಂದ ಒಂದು ಇಲಿ ಆಯ ತಪ್ಪಿ ಸಿಂಹದ ಮೇಲೆ ಬಿದ್ದಿತು. ಸಿಂಹ ಇಲಿಯನ್ನು ಹಿಡಿದುಕೊಂಡು ಕೋಪದಿಂದ 'ನನಗೇ ನಿದ್ರೆ ಭಂಗ ಉಂಟು ಮಾಡುತ್ತೀಯ! ನಿನಗೆಷ್ಟು ಧೈರ್ಯ. ಈಗಲೇ ನಿನ್ನನ್ನು ಯಮಪುರಿಗೆ ಕಳುಹಿಸುತ್ತೇನೆ' ಎಂದು ಘರ್ಜಿಸಿತು. ಆಗ ಇಲಿ ಸಿಂಹದೊಂದಿಗೆ, 'ನಾನು ಮರದ ಮೇಲೆ ಆಡುತ್ತಾ ಇರಲು ಆಯತಪ್ಪಿ ನಿಮ್ಮ ಮೇಲೆ ಬಿದ್ದಿದೀನಿ! ದಯಮಾಡಿ ನನ್ನನ್ನು ಕ್ಷಮಿಸಿರಿ! ನಿಮಗೆ ಅವಸರ ಬಂದಾಗ ಸಹಾಯ ಮಾಡಿ ನಿಮ್ಮ ಋಣ ತೀರಿಸುಕೊಳ್ಳುತ್ತೀನಿ' ಎಂದು ವಿನಯ ಪೂರ್ವಕವಾಗಿ ಬೇಡಿಕೊಂಡಿತು. ಆಗ ಸಿಂಹ, 'ನೀನು ನನಗೆ ಸಹಾಯ ಮಾಡುವುದಾ?' ಎಂದು ಹೇಳುತ್ತಾ ಪಕಪಕನೆ ನಗುತ್ತಾ ಅದರ ಮೇಲೆ ಕರುಣೆ ತೋರಿ ಬಿಟ್ಟು ಬಿಟ್ಟಿತು.

ಸ್ವಲ್ಪ ಕಾಲದ ನಂತರ ಒಬ್ಬ ಬೇಟೆಗಾರ ಹಾಕಿದ ಬಲೆಯಲ್ಲಿ ಬಂಧಿಯಾಯಿತು ಸಿಂಹ. ಇದನ್ನು ನೋಡಿದ ಇಲಿ ಕೂಡಲೆ ಹೋಗಿ ಗರಗಸದಂತಿರುವ ತನ್ನ ಚೂಪಾದ ಹಲ್ಲುಗಳಿಂದ ಬಲೆಯನ್ನು ತುಂಡರಿಸಿ ಮೃಗರಾಜನನ್ನು ಬಂಧಮುಕ್ತಗೊಳಿಸಿತು. 'ಮೃಗರಾಜನಂತವನಿಗೆ ಸಹಾಯ ಮಾಡಿದ ಇಲಿಯ ಮುಂದೆ ಇನ್ನು ನಾವೆಷ್ಟು! ಅದಕ್ಕಾಗಿ ಏಡಿಯನ್ನು ಜೊತೆಯಾಗಿ ತೆಗೆದುಕೊಂಡು ಹೋಗು' ಎಂದು ಆ ತಾಯಿ ಮಗನಿಗೆ ಹೇಳಿದಳು. ತಾಯಿಯ ಬಲವಂತದ ಮೇಲೆ ರಾಮಶರ್ಮ ಏಡಿ ಇರುವ ಡಬ್ಬಿಯನ್ನು ಒಂದು ಚೀಲದಲ್ಲಿ ಹಾಕಿಕೊಂಡು ತಾನು ಹೋಗಬೇಕಾದ ಊರಿಗೆ ಪ್ರಯಾಣ ಬೆಳೆಸಿದನು.

ರಾಮಶರ್ಮ ಸ್ವಲ್ಪ ದೂರ ಹೋದ ಮೇಲೆ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಒಂದು ಆಲದ ಮರದ ಕೆಳಗೆ ಮಲಗಿಕೊಂಡನು. ಪ್ರಯಾಣದಲ್ಲಿ ಬಹಳ ಬಳಲಿ ಹೋಗಿರುವುದರಿಂದ ಕೂಡಲೆ ನಿದ್ರೆಗೆ ಜಾರಿದನು. ಆ ಆಲದ ಮರಕ್ಕೆ ಹತ್ತಿಕೊಂಡು ಒಂದು ಹುತ್ತ ಇತ್ತು. ಹುತ್ತದೊಳಗಿನಿಂದ ಒಂದು ಸರ್ಪ ಮೆಲ್ಲಗೆ ಹೊರಬಂದು ಕರ್ಪೂರದ ವಾಸನೆಯ ಜಾಡುಹಿಡಿದು ಡಬ್ಬಿಯ ಮೇಲಿನ ಮುಚ್ಚಳ ತೆಗೆಯಿತು. ಅದರಲ್ಲಿದ್ದ ಏಡಿ ಹೊರಗೆ ಬಂದು ಸರ್ಪವನ್ನು ನೋಡಿತು. ಕೂಡಲೆ ಒಂದೇ ಉಸಿರಿಗೆ ಸರ್ಪದ ಕತ್ತನ್ನು ಗಟ್ಟಿಯಾಗಿ ಹಿಡಿದುಕೊಂಡು ಎರಡು ತುಂಡಾಗಿ ಕತ್ತರಿಸಿತು. ಹಾವು ಸತ್ತುಹೋಯಿತು ಅಷ್ಟರಲ್ಲಿ ರಾಮಶರ್ಮನಿಗೆ ಎಚ್ಚರವಾಯಿತು. ಹಾವು ಎರಡು ತುಂಡಾಗಿರುವುದು, ಏಡಿ ಬಾಯಿಗೆ ರಕ್ತ ಅಂಟಿರುವುದನ್ನು ನೋಡಿ ಜರುಗಿಹೋಗಿದ್ದನ್ನು ಗ್ರಹಿಸಿದನು. ಅಮ್ಮ ಡಬ್ಬಿಯಲ್ಲಿ ಏಡಿ, ಕರ್ಪೂರ ಹಾಕಿದ್ದು ಒಳ್ಳೇದಾಯಿತು. ಇದರಿಂದ ನನ್ನ ಪ್ರಾಣ ಉಳಿಯಿತು. ಅದಕ್ಕೇ ನಾವು ಪ್ರಯಾಣ ಮಾಡುವಾಗ ಯಾರಾದರೊಬ್ಬರು ನಮ್ಮ ಜೊತೆಯಲ್ಲಿ ಇರಬೇಕೆಂದು ಅಮ್ಮ ಹೇಳಿದ್ದು ಎಷ್ಟು ಸಮಂಜಸವಾಗಿದೆ ಎಂದುಕೊಂಡ ರಾಮಶರ್ಮ. ನಂತರ ತಾನು ಹೋದ ಕೆಲಸ ಮುಗಿಸಿಕೊಂಡು ಕ್ಷೇಮವಾಗಿ ಮನೆಗೆ ಹಿಂತಿರುಗಿ ಬಂದ ರಾಮಶರ್ಮ.

**-ಎಂ.ಬಿ.ರಂಗಪ್ಪ ಶೆಟ್ಟಿ ಮೋಕಾ, ಬಳ್ಳಾರಿ**